15ನೇ ಎ
(35)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್.ಬೋಜೇಗೌಡ ಇವರ ನಿಯಮ 72ರ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

**ಪ್ರಶ್ನೆ:**

ರಾಜ್ಯದಲ್ಲಿ ಪ್ರತಿವರ್ಷ ಮಾರ್ಚ್/ಏಪ್ರಿಲ್ ನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗಳು ನಡೆಸಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ 2-3 ವಾರ್ಷಿಕ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಈ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಪ್ರತಿ ವರ್ಷ ಸಕಾಲದಲ್ಲಿ ಸಾವಿರಾರು ಶಿಕ್ಷಕರು ಮತ್ತು ಉಪನ್ಯಾಸಕರು ಮೌಲ್ಯಮಾಪನ ಮಾಡುತ್ತಾರೆ. ಮೌಲ್ಯಮಾಪನ ಮಾಡುವ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಇಲಾಖೆಯಿಂದ ಪ್ರತಿ ಉತ್ತರ ಪತ್ರಿಕೆಗೆ ಇಂತಿಷ್ಟು ಹಣವನ್ನು ನಿಗದಿಗೊಳಿಸಿ ಮೌಲ್ಯಮಾಪನ ಮಾಡಿಸಲಾಗುತ್ತಿದೆ. ಆದರೆ, ಮೌಲ್ಯಮಾಪನ ಮಾಡಿದ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ನೀಡಬೇಕಾದ ಮೌಲ್ಯಮಾಪನ ಭತ್ಯೆಯನ್ನು ಸಕಾಲದಲ್ಲಿ ನೀಡದೇ ತುಂಬಾ ವಿಳಂಬ ಮಾಡಲಾಗುತ್ತಿದ್ದು, ಈ ವಿಷಯವು ಹಲವಾರು ದಿನಪತ್ರಿಕೆಗಳಲ್ಲಿಯೂ ಬಂದಿರುವುದು ವಿಷಾಧನೀಯವಾಗಿದೆ. ಆದ್ದರಿಂದ, ಮೌಲ್ಯಮಾಪನ ಭತ್ಯೆಯನ್ನು ಸಕಾಲಕ್ಕೆ ನೀಡಬೇಕೆಂಬ ವಿಷಯದ ಬಗ್ಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ರಾಜ್ಯದಲ್ಲಿ 2026ರ ಮಾರ್ಚ್/ಏಪ್ರಿಲ್ ನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗಳು ನಡೆಸಲಾಗಿದ್ದು, ಸದರಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ ಶಿಕ್ಷಕರು / ಉಪನ್ಯಾಸಕರುಗಳಿಗೆ ನೀಡಲಾದ ಮೌಲ್ಯಮಾಪನ ಭತ್ಯೆಯ ಕುರಿತಾದ ವಿವರ ಈ ಕೆಳಕಂಡಂತಿದೆ;

**<u>ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೌಲ್ಯಮಾಪಕರ ಸಂಭಾವನೆ ಪಾವತಿ ಕುರಿತು:</u>**

2026ರ ಮಾರ್ಚ್/ಏಪ್ರಿಲ್ ನಲ್ಲಿ ನಡೆದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನ ಕಾರ್ಯವು ರಾಜ್ಯದ ಎಲ್ಲಾ ಜಿಲ್ಲಾ ಮೌಲ್ಯಮಾಪನ ಕೇಂದ್ರಗಳಲ್ಲಿ ದಿನಾಂಕ:06.04.2026 ರಿಂದ 17.04.2026ರವರೆಗೆ ನಡೆದಿದ್ದು, ಪರೀಕ್ಷಾ ಫಲಿತಾಂಶವನ್ನು ದಿನಾಂಕ:23.04.2026 ರಂದು ಪ್ರಕಟಿಸಲಾಗಿರುತ್ತದೆ.

ಸರ್ಕಾರವು ಎಸ್.ಎಸ್.ಎಲ್.ಸಿ ಪರೀಕ್ಷೆಯ ಮೌಲ್ಯಮಾಪಕರಿಗೆ ಆಧಾರ್ ಆಧಾರಿತ ಡಿಬಿಟಿ ಮೂಲಕ ಸಂಭಾವನೆ ಪಾವತಿಸಲು ಕ್ರಮವಹಿಸಲಾಗಿದ್ದು, ಬ್ಯಾಂಕ್ ಮತ್ತು ಡಿಬಿಟಿಗೆ ಇಂಟಿಗ್ರೇಶನ್ ಮಾಡುವ ಪ್ರಕ್ರಿಯೆ ಪೂರ್ಣಗೊಂಡ ನಂತರ ಮೇ 2026ರ ಮಾಹೆಯಿಂದ ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸಿದ ಒಟ್ಟು 81,580 ಫಲಾನುಭವಿಗಳಿಗೆ ಡಿಬಿಟಿ ಮೂಲಕ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆಯನ್ನು ಹಾಗೂ ಒಟ್ಟು 61,761 ಮೌಲ್ಯಮಾಪಕರಿಗೆ ಡಿಬಿಟಿ ಮೂಲಕ ಪ್ರಯಾಣ ಭತ್ಯೆ, ದಿನ ಭತ್ಯೆ, ಸಂಭಾವನೆಯನ್ನು ಪಾವತಿಸಲು ಕ್ರಮವಹಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ;

| ಒಟ್ಟು ಮೌಲ್ಯಮಾಪಕರ ಸಂಖ್ಯೆ | ಮೌಲ್ಯಮಾಪನ ಭತ್ಯೆಯನ್ನು ಪಾವತಿಸಲಾದ ಮೌಲ್ಯಮಾಪಕರ ಸಂಖ್ಯೆ | ಮೌಲ್ಯಮಾಪನ ಭತ್ಯೆ ಪಾವತಿಸಲು ಬಾಕಿಯಿರುವ ಮೌಲ್ಯಮಾಪಕರ ಸಂಖ್ಯೆ |
|---|---|---|
| 61,761 | 61,222 | 539 |

ಮೇಲ್ಕಂಡಂತೆ 61,761 ಮೌಲ್ಯಮಾಪಕರುಗಳ ಪೈಕಿ ಒಟ್ಟು 61,222 ಫಲಾನುಭವಿಗಳಿಗೆ ಡಿಬಿಟಿ ಮೂಲಕ ಆಧಾರ್ ಸೀಡಿಂಗ್ ಆಗಿರುವ ಬ್ಯಾಂಕ್ ಖಾತೆಗೆ ಪಾವತಿಯಾಗಿರುತ್ತದೆ. ಉಳಿದ 539 ಮೌಲ್ಯಮಾಪಕರುಗಳು ಆಧಾರ್ ಸೀಡಿಂಗ್ ಮಾಡದಿರುವುದರಿಂದ ಮತ್ತು ವಿವಿಧ ಕಾರಣಗಳಿಂದಾಗಿ (ಬ್ಯಾಂಕ್ ಖಾತೆ ಸ್ಥಗಿತ, ಬ್ಯಾಂಕ್ ಖಾತೆ ಮುಕ್ತಾಯ, ಲೋನ್/ಡೆಫ್ ಖಾತೆ) ಪಾವತಿಯಾಗದೇ ಇರುವುದರಿಂದ ತಿರಸ್ಕೃತಗೊಂಡಿರುತ್ತದೆ. ಸದರಿ ತಿರಸ್ಕೃತ ಫಲಾನುಭಾವಿಗಳ ಪಟ್ಟಿಯನ್ನು ಮಂಡಲಿಯ ಜಾಲತಾಣದಲ್ಲಿ ಲಭ್ಯಗೊಳಿಸಿ ಜಿಲ್ಲಾ ಉಪನಿರ್ದೇಶಕರು, ಜಿಲ್ಲಾ ನೋಡಲ್ ಅಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಂಬಂಧಿಸಿದ ಶಿಕ್ಷಕರು ತಿರಸ್ಕೃತ ಕಾರಣಗಳನ್ವಯ ಸರಿಪಡಿಸಲು ಆಯುಕ್ತಾಲಯವು ಸೂಚಿಸಿರುತ್ತದೆ.

..2

**<u>ಪದವಿಪೂರ್ವ ಪರೀಕ್ಷೆಯ ಮೌಲ್ಯಮಾಪಕರ ಸಂಭಾವನೆ ಪಾವತಿ ಕುರಿತು:</u>**

2026ರ ಮಾರ್ಚ್/ಏಪ್ರಿಲ್ ನಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನ ರಾಜ್ಯದ ಎಲ್ಲಾ ಜಿಲ್ಲಾ ಮೌಲ್ಯಮಾಪನ ಕೇಂದ್ರಗಳಲ್ಲಿ ದಿನಾಂಕ: 18-03-2026 ರಿಂದ 03-04-2026ರವರೆಗೆ ಮೌಲ್ಯಮಾಪನ ಕಾರ್ಯ ನಡೆದಿದ್ದು ಫಲಿತಾಂಶವನ್ನು ದಿನಾಂಕ:09.04-2026 ರಂದು ಪ್ರಕಟಿಸಲಾಗಿರುತ್ತದೆ. ಸರ್ಕಾರದಿಂದ ಪಿಯು ಪರೀಕ್ಷಾ ವಿವಿಧ ಚಟುವಟಿಕೆಗಳಿಗಾಗಿ ದಿನಾಂಕ:06.05.2026ರಂದು ಅನುದಾನ ಬಿಡುಗಡೆಯಾಗಿರುತ್ತದೆ.

ಪಿಯು ಪರೀಕ್ಷಾ ಕಾರ್ಯದ ಪ್ರಾಯೋಗಿಕ ಪರೀಕ್ಷೆ, ಪರೀಕ್ಷಾ ಕೇಂದ್ರ, ಜಾಗೃತದಳ, ಶಿಭಿರಾಧಿಕಾರಿಗಳು ಮತ್ತು ಮರು ಮೌಲ್ಯಮಾಪನ ಚಟುವಟಿಕೆಗಳಲ್ಲಿ ಭಾಗವಹಿಸಿದ 63,269 ಫಲಾನುಭವಿಗಳಿಗೆ ಡಿಬಿಟಿ ಮೂಲಕ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆಯನ್ನು ಸಕಾಲದಲ್ಲಿ ಆಯುಕ್ತಾಲಯವು ಪಾವತಿಸಲಾಗಿದೆ. ಸದರಿ ಪರೀಕ್ಷೆಯ ಮೌಲ್ಯಮಾಪಕರಿಗೆ ಆಧಾರ್ ಆಧಾರಿತ ಡಿಬಿಟಿ ಮೂಲಕ ಸಂಭಾವನೆ ಪಾವತಿಸಲು ಸರ್ಕಾರದ ಆದೇಶದನ್ವಯ ಕ್ರಮವಹಿಸಲಾಗಿದ್ದು, ದಿನಾಂಕ: 16.05.2026ರಂದು ಒಟ್ಟು 27,700 ಮೌಲ್ಯಮಾಪಕರಿಗೆ ಡಿಬಿಟಿ ಮೂಲಕ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆಯನ್ನು ಪಾವತಿಸಲು ಕ್ರಮವಹಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ;

| **ಒಟ್ಟು ಮೌಲ್ಯಮಾಪಕರ ಸಂಖ್ಯೆ** | **ಮೌಲ್ಯಮಾಪನ ಭತ್ಯೆಯನ್ನು ಪಾವತಿಸಲಾದ ಮೌಲ್ಯಮಾಪಕರ ಸಂಖ್ಯೆ** | **ಮೌಲ್ಯಮಾಪನ ಭತ್ಯೆ ಪಾವತಿಸಲು ಬಾಕಿಯಿರುವ ಮೌಲ್ಯಮಾಪಕರ ಸಂಖ್ಯೆ** |
|---|---|---|
| 27,700 | 27,215 | 485 |

ಮೇಲ್ಕಂಡಂತೆ ಒಟ್ಟು 27,700 ಮೌಲ್ಯಮಾಪಕರುಗಳ ಪೈಕಿ ಒಟ್ಟು 27,215 ಫಲಾನುಭವಿಗಳಿಗೆ ಡಿಬಿಟಿ ಮೂಲಕ ಆಧಾರ್ ಸೀಡಿಂಗ್ ಆಗಿರುವ ಬ್ಯಾಂಕ್ ಖಾತೆಗೆ ಪಾವತಿಯಾಗಿರುತ್ತದೆ. ಉಳಿದ 485 ರಲ್ಲಿ 343 ಮೌಲ್ಯಮಾಪಕರ ಸಂಭಾವನೆಯನ್ನು ಅಸಮರ್ಪಕ ಮೌಲ್ಯಮಾಪನ ಮಾಡಿರುವುದರಿಂದ ಪಾವತಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಹಾಗೂ ಸದರಿಯವರಿಗೆ ನೋಟೀಸ್ ಜಾರಿಮಾಡಿದ್ದು, ವಿಚಾರಣೆ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಇನ್ನುಳಿದ 142 ಮೌಲ್ಯಮಾಪಕರ ಆಧಾರ್ ಸೀಡಿಂಗ್ ಮಾಡದಿರುವುದರಿಂದ ಮತ್ತು ವಿವಿಧ ಕಾರಣಗಳಿಂದಾಗಿ (ಬ್ಯಾಂಕ್ ಖಾತೆ ಸ್ಥಗಿತ, ಬ್ಯಾಂಕ್ ಖಾತೆ ಮುಕ್ತಾಯ, ಲೋನ್/ಡೆಫ್ ಖಾತೆ) ಪಾವತಿಯಾಗದೇ ಇರುವುದರಿಂದ ತಿರಸ್ಕೃತಗೊಂಡಿರುತ್ತದೆ.

ಸದರಿ ತಿರಸ್ಕೃತ ಫಲಾನುಭಾವಿಗಳ ಪಟ್ಟಿಯನ್ನು ಮಂಡಲಿಯ ಜಾಲತಾಣದಲ್ಲಿ ಹಾಗೂ ಕಾಲೇಜು ಲಾಗಿನ್ ನಲ್ಲಿ ಲಭ್ಯಗೊಳಿಸಲಾಗಿದೆ. ಈ ಸಂಬಂಧ ಜಿಲ್ಲಾ ಪಿಯು ಉಪನಿರ್ದೇಶಕರುಗಳಿಗೆ ಸಂಬಂಧಿಸಿದ ಉಪನ್ಯಾಸಕರುಗಳಿಗೆ ತಿರಸ್ಕೃತ ಕಾರಣಗಳನ್ವಯ ಸರಿಪಡಿಸಲು ಈಗಾಗಲೇ ಆಯುಕ್ತಾಲಯವು ಸೂಚಿಸಿರುತ್ತದೆ.

ಸಂಖ್ಯೆ: ಇಪಿ 200 ಎಸ್ಎಲ್‌ಬಿ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು